

ರಾಜ್‌ಕುಮಾರ್ ನೆನಪುಗಳು ಉಸಿರಾಡುತ್ತಿರುವ ಈ ಪುಟ್ಟ ಅಂಗಡಿ ನಂಜನಗೂಡಿನ ರಸಬಾಳೆಯ ರಾಯಭಾರಿ ಫೋಟೊ: ಎಂ. ಪ್ರಕಾಶ್

ಅವರು ಅಲ್ಲೇ ಕೊಟ್ಟ 'ರೆಡಿ ಟು ಈಟ್' ಬಾಳೆಹಣ್ಣುಗಳು ಬಹಳ ರುಚಿಯಾಗಿದ್ದವು. ಚೆನ್ನಾಗಿದೆಯೆಂದು ಹೇಳಿದೆ. ಯಜಮಾನರಿಗೆ ವ್ಯಾಪಾರ ಮಾಡಿ ಹಣ ಪಡೆದಾಗಲೂ ಆಗದಷ್ಟು ಸಂತೋಷ ಅವರ ಅಂಗಡಿಯ ಹಣ್ಣು ತಿಂದು ಹೊಗಳಿದಾಗ ಆಯಿತೆಂದರೆ ತಪ್ಪಿಲ್ಲ. ಅವರು ತಕ್ಷಣ ನಕ್ಕು, 'ನಮ್ಮ ಅಂಗಡಿ ಹಣ್ಣು ಅಂದರೆ ರಾಜ್‌ಕುಮಾರ್ ಅವ್ರಿಗೆ ಎಷ್ಟಿಷ್ಟ ಇತ್ತು ಗೊತ್ತಾ?' ಅಂದರು.

ನನ್ನ ತಲೆಮಾರಿನ ಅನೇಕರಿಗೆ ಬರುವ ತಕ್ಷಣದ ಕುತೂಹಲದ ಪ್ರಶ್ನೆ ನನಗೂ ಬಂತು. ಕೇಳಿದೆ. 'ಸರ್, ನೀವು ರಾಜ್‌ಕುಮಾರ್ ಅವರನ್ನು ನೋಡಿದ್ರಾ?'

ಅವರು ಮತ್ತೊಮ್ಮೆ ನಕ್ಕು, 'ನೋಡಿ ಅಲ್ಲಿ...' ಎಂದು ಬಾಳೆಗೊನೆಗಳ ಮೇಲೆ ಹಾಕಿದ್ದ ಕೆಲವು ಫೋಟೊಗಳನ್ನು ತೋರಿಸಿದರು. ಸುಮಾರು ಎಂಬತ್ತರ ದಶಕದ ಬ್ಲಾಕ್ ಅಂಡ್ ವೈಟ್ ಫೋಟೊಗಳವು. ನನಗೆ ಬರಬಹುದಾದ ಅನುಮಾನವನ್ನು ಮುಂಚೆಯೇ ಗಮನಿಸಿ 'ಅವರ ಪಕ್ಕದಲ್ಲಿರೋದೇ ನಾನು!' ಎಂದರು.

ಬಿಳಿಯ ಬಣ್ಣದ ನೈಟ್ ಡ್ರೆಸ್ಸಿನಂಥ ಉಡುಪಿನಲ್ಲಿದ್ದ ಅಣ್ಣಾವ್ರು, ಇವರ ಹೆಗಲ ಮೇಲೆ ಆತ್ಮೀಯವಾಗಿ ಕೈಹಾಕಿ ನಿಂತಿದ್ದ ಫೋಟೊ ಅದು.

'ನಮ್ಮ ಅಂಗಡಿ ಹಣ್ಣುಗಳನ್ನು ಅವರ ಬೆಂಗಳೂರಿನ ಮನೆಗೆ ಕಳಿಸ್ತಾ ಇದ್ವು! ಈ ಹಣ್ಣುಗಳನ್ನು ಕಂಡ್ರೆ ಭಾರೀ ಇಷ್ಟ ಅವರಿಗೆ. ನಮ್ಮ ತೋಟದ್ದೇ ಎರಡು ಬಾಳೆ ಗಿಡಗಳನ್ನು ತರಿಸಿ ಅವರ ಪುನೀತ್ ಫಾರಂನಲ್ಲೂ ಹಾಕಿಸಿದ್ದರು' ಎಂದು ಆ ಫೋಟೊಗಳತ್ತ ಬೆರಳು ತೋರುತ್ತಲೇ ವಿವರಿಸಿದರು.

ಆಗ ನಾನು, 'ಈ ಫೋಟೊ ಯಾವಾಗಿಂದು ಸರ್?' ಎಂದು ಕೇಳಿದಾಗ, ತಕ್ಷಣ... 'ಹೊಸಬೆಳಕು, ಎಂಬತ್ತೆರಡನೇ ಇಸ್ವಿ, ಸರಿತಾ ಇದಾರೆ ನೋಡಿ ಅಲ್ಲಿ. ಹೊಸಬೆಳಕು ಶೂಟಿಂಗು ಮೈಸೂರಲ್ಲಿ ನಡೀತಾ ಇತ್ತು. ಸುಜಾತಾ ಅಂತ ಹೋಟೆಲ್ಲು, ಅಲ್ಲೇ ಅವರು ಉಳೀತಾ ಇದ್ದಿದ್ದು. ಹೀಗೇ ಒಮ್ಮೆ ಅವರು ಬಂದಿದಾರೆ ಅಂತ ಗೊತ್ತಾಗಿ ಬಾಳೆಹಣ್ಣುಗಳನ್ನು ತಗೊಂಡು ಅಲ್ಲಿಗೆ ಹೋದೆ. ಅದನ್ನು ಕೊಟ್ಟು ಒಂದು ಫೋಟೊ ತೆಗೆಸೋಣಾ ಅಂತ...' ಅಂದು ಮತ್ತೊಮ್ಮೆ ಆ ಫೋಟೊಗಳತ್ತ ಕಣ್ಣು ಹಾಯಿಸಿದರು.

ಮುಂದುವರೆದು, 'ಅವತ್ತು ಹಣ್ಣು ಕೊಟ್ಟು ಹೊರಟ ನನ್ನನ್ನ ರಾಜ್‌ಕುಮಾರ್ ಅವ್ರೇ ಬಂದು, ನಿಮ್ದು ಊಟ ಆಯ್ತಾ ಅಂತ ಕೇಳಿದ್ರು. ಮಾಡ್ಕೊಂಡು ಊರಿಗೆ ಹೋಗ್ತೀನಿ ಅಂದೆ. ತಕ್ಷಣ ಅವ್ರು, ನಮ್ ಜೊತೇನೆ ಊಟ ಮಾಡಿ ಅಂತ ಆ ಟೇಬಲ್‌ಗೇನೇ ಒಂದು ತಟ್ಟೆ ತರಿಸಿ ಊಟ ಹಾಕಿಸಿ, ಫೋಟೊ ತೆಗೆಸಿಕೊಂಡು ಕಳಿಸಿಕೊಟ್ಟರು' ಎಂದು ಮೇಲಕ್ಕೊಮ್ಮೆ ನೋಡಿ ಮುಂಗೈ ಜೋಡಿಸಿದರು.

ಆಮೇಲೆ ಅವರಿಗೊಂದು ನಮಸ್ಕಾರ ಹೇಳಿ ನಾನೂ ಹೊರಟೆ. ನಂತರ ಅವರು ರಾಜ್‌ಕುಮಾರ್ ಅವರ ಬಗ್ಗೆ ಹೇಳಿದ ಮಾತುಗಳನ್ನು ಮೆಲುಕು ಹಾಕಿಕೊಳ್ಳುತ್ತಾ ಸಾಗಿದೆ. ರಾಜ್‌ಕುಮಾರ್ ಎಂಬ ವ್ಯಕ್ತಿತ್ವ ಕನ್ನಡ ಮನಸ್ಸುಗಳಿಗೆ ಅಷ್ಟು ಹತ್ತಿರವಾಗಲು ಕಾರಣ ಅವರ ಯಶಸ್ಸು ಹಾಗೂ ಪ್ರಖ್ಯಾತಿಗಳನ್ನು ಮೀರಿದ ಸರಳತೆ. ಅವರನ್ನು ಭೇಟಿ ಮಾಡಿದ ಬಹುಪಾಲು ಎಲ್ಲರಲ್ಲೂ ಅಮೂಲ್ಯ ಅನುಭವವೊಂದನ್ನು, ತಾವಷ್ಟೇ ಕಾಪಿಟ್ಟುಕೊಳ್ಳಬಹುದಾದಂಥ ಅಪೂರ್ವ ಘಟನೆಯ ನೆನಪೊಂದನ್ನು ರಾಜ್‌ಕುಮಾರ್ ಉಳಿಸಿರುತ್ತಾರಲ್ಲವೇ ಎಂದು ಅನಿಸಿತು.

'...ಅರಳಿದ ಸುಮದಲಿ
ನಲಿಯುವ ಭ್ರಮರವು
ಶಿವನಾಮ ಹಾಡುತಿದೆ...'

ಎಂಬ ಗೀತೆಯು ಅದೇ ರಸ್ತೆಯ ವಿಭೂತಿ ಅಂಗಡಿಯಲ್ಲಿ ಕೇಳುವ ಹೊತ್ತಿಗೆ, ಆ ಯಜಮಾನರ ಮನಸ್ಸಿನಲ್ಲಿ ಇನ್ನೂ ಹಸಿರಾಗಿರುವ ನಲವತ್ತು ವರ್ಷಗಳಷ್ಟು ಹಿಂದಿನ ಒಡನಾಟ ಕಣ್ಮುಂದೆ ಬಂತು. ಹಾಗೆಯೇ ಇನ್ನೂ ಅನೇಕರಲ್ಲಿ 'ರಾಜ್' ಎಂಬ ಹೆಸರು ತರುವ ಸ್ಫೂರ್ತಿ ಹಾಗೂ ಪುಲಕಗಳು ಹಾಡಿನೊಟ್ಟಿಗೆ ಕಿವಿ ಹಾಗೂ ಮನಸ್ಸನ್ನು ತಲುಪಿತು.

ಸಣ್ಣ ಸಣ್ಣ ಊರುಗಳಲ್ಲಿ, ವ್ಯಾಪಾರ–ವ್ಯವಹಾರಗಳನ್ನು ಮೀರಿ ಅಂಗಡಿಯವರಿಗೂ, ಕೊಳ್ಳುವವರಿಗೂ ಏರ್ಪಡುವ ಸ್ನೇಹ ಸಂಬಂಧವಿದೆಯಲ್ಲಾ, ಅದು ಎಲ್ಲಾ ಲಾಭ, ಡಿಸ್ಕೌಂಟುಗಳನ್ನು ಮೀರಿದ್ದು ಎಂಬುದಂತೂ ಸತ್ಯ. ಅಂದಹಾಗೆ, ಇಷ್ಟೆಲ್ಲ ಕೇಳಿ ಅವರ ಫೋಟೊ ಒಂದನ್ನು ತೆಗೆದುಕೊಳ್ಳದೇ ಮರೆತುಬಂದ ನನ್ನ ಅಜ್ಞಾನಕ್ಕೆ ಏನನ್ನಬೇಕೋ ಗೊತ್ತಾಗುತ್ತಿಲ್ಲ. ಇರಲಿ, ಅದಕ್ಕೆಂದೇ ಇನ್ನೊಮ್ಮೆ ಹೋದರಾಯಿತು.

ಶ್ರೀಕಂಠ, ನಮ್ಮ ಪ್ರತಿ ವರುಷದ ನೆಂಟ!

ಪ್ರತಿಕ್ರಿಯಿಸಿ: feedback@sudha.co.in